# ರೇಷ್ಮೆ ಇಲಾಖೆ, ಚನ್ನರಾಯಪಟ್ಟಣ

**ಚನ್ನರಾಯಪಟ್ಟಣ ತಾಲ್ಲೂಕು** ದ್ವಿತಳಿ ಬಿತ್ತನೆ ರೇಷ್ಮೆ ಗೂಡು ಉತ್ಪಾದನೆಯಲ್ಲಿ ಹಾಸನ ಜಿಲ್ಲೆಗೆ ಪ್ರಥಮ ಸ್ಥಾನದಲ್ಲಿದ್ದು, ತಾಲ್ಲೂಕಿನಲ್ಲಿ ಉತ್ಪಾದನೆಯಾಗುತ್ತಿರುವ ರೇಷ್ಮೆ ದ್ವಿತಳಿ ಬಿತ್ತನೆ ಗೂಡಿಗೆ ರಾಜ್ಯಾಂದ್ಯಂತ ನಿರಂತರ ಬೇಡಿಕೆ ಇದೆ. ತಾಲ್ಲೂಕಿನ ಕೃಷಿ ಭೂಮಿ, ವಾತಾವರಣ ಹಾಗೂ ಮಾನವ ಸಂಪನ್ಮೂಲ ರೇಷ್ಮೆ ಕೃಷಿಗೆ ಪೂರಕವಾಗಿದ್ದು, ವರ್ಷವಿಡೀ ರೇಷ್ಮೆ ಕೃಷಿಗೆ ಯೋಗ್ಯ ವಾತಾವರಣ ಇರುತ್ತದೆ.

ರೇಷ್ಮೆ ಕೃಷಿಯ ವರಮಾನ ಆಕರ್ಷಕವಾಗಿದ್ದು ಕೃಷಿಕರಿಗೆ ಆರ್ಥಿಕ ಅವಲಂಬನೆಗೆ ಸಹಕಾರಿಯಾಗಿದೆ. ಪ್ರತ್ಯೇಕ ಹುಳು ಸಾಕಾಣಿಕೆ ಮನೆ ಹಾಗೂ ನೀರಾವರಿ ಸೌಲಭ್ಯವಿರುವ ಹಿಪ್ಪುನೇರಳೆ ತೋಟ ಹೊಂದಿರುವ ರೇಷ್ಮೆ ಬೆಳೆಗಾರರು ಮನೆ ಮಂದಿಯ ಸಹಕಾರದೊಂದಿಗೆ, ಗುಡಿ ಕೈಗಾರಿಕೆಯಾದ ರೇಷ್ಮೆ ಕೃಷಿಯನ್ನು ಅವಲಂಬಿಸಿ ಸಂತೃಪ್ತ ಜೀವನ ನಿರ್ವಹಿಸುತ್ತಿದ್ದಾರೆ. ತಾಲ್ಲೂಕಿನಲ್ಲಿ ಚನ್ನರಾಯಪಟ್ಟಣದಲ್ಲಿ ಒಂದು ಹಾಗೂ ನುಗ್ಗೇಹಳ್ಳಿಯಲ್ಲಿ ಒಂದು ಒಟ್ಟು ಎರಡು ತಾಂತ್ರಿಕ ಸೇವಾ ಕೇಂದ್ರಗಳಿದ್ದು, ಒಟ್ಟು 10 ವಲಯಗಳ ವ್ಯಾಪ್ತಿಯಲ್ಲಿ ರೇಷ್ಮೆ ಕೃಷಿ ವಿಸ್ತರಣೆಯಾಗುತ್ತಿದೆ. 31-3-2010 ರಂತೆ ತಾಲ್ಲೂಕಿನಲ್ಲಿ ಒಟ್ಟು 102 ರೇಷ್ಮೆ ಗ್ರಾಮಗಳಲ್ಲಿ 192.75 ಹೆಕ್ಟೇರ್ಸ್ ಹಿಪ್ಪುನೇರಳೆ ಕ್ಷೇತ್ರವಿದ್ದು, 365 ಜನ ರೇಷ್ಮೆ ಬೆಳೆಗಾರರು ಉತ್ತಮವಾಗಿ ರೇಷ್ಮೆಕೃಷಿ ನಿರ್ವಹಣೆ ಮಾಡುತ್ತಿರುತ್ತಾರೆ.

ತಾಂತ್ರಿಕ ಮಾಹಿತಿ ನೀಡಲು ತಾಲ್ಲೂಕಿನ ಕೇಂದ್ರಸ್ಥಾನದಲ್ಲಿ ಒಬ್ಬರು ರೇಷ್ಮೆ ಸಹಾಯಕ ನಿರ್ದೇಶಕರು ಹಾಗೂ ಒಬ್ಬರು ರೇಷ್ಮೆ ವಿಸ್ತರಣಾಧಿಕಾರಿಗಳು ಮತ್ತು 10 ವಲಯಗಳಲ್ಲಿ 10 ಜನ ರೇಷ್ಮೆ ವಲಯಾಧಿಕಾರಿಗಳಿದ್ದು, ರೇಷ್ಮೆ ಬೆಳೆಗಾರರಿಗೆ ತಾಂತ್ರಿಕ ಮಾಹಿತಿ ಹಾಗೂ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಕೇಂದ್ರ ಪುರಸ್ಕೃತ (ಸಿಡಿಪಿ ಯೋಜನೆ), ರಾಜ್ಯ ರೇಷ್ಮೆ ಯೋಜನೆ, ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯಿತಿ ಅನುದಾನಿತ ಯೋಜನೆಗಳಡಿಯಲ್ಲಿ ರೇಷ್ಮೆ ಬೆಳೆಗಾರರಿಗೆ ತಾಂತ್ರಿಕ ಮಾಹಿತಿ , ತರಬೇತಿ ಕಾರ್ಯಕ್ರಮ, ರೋಗ ನಿಯಂತ್ರಣ ಕಾರ್ಯಕ್ರಮಗಳ ನೆರವು, ಅಧ್ಯಯನ ಪ್ರವಾಸ , ವಿಸ್ತರಣಾ ಹಾಗೂ ಪ್ರಚಾರ ಕಾರ್ಯಗಳು ಹಾಗೂ ಹನಿ ನೀರಾವರಿ , ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ, ರೇಷ್ಮೆ ಹುಳು ಸಾಕಾಣಿಕೆ ಉಪಕರಣ ಖರೀದಿಗೆ ಸಹಾಯಧನ ಸೌಲಭ್ಯಗಳನ್ನು ಕಲ್ಪಿಸುತ್ತಾ ರೇಷ್ಮೆ ಬೆಳೆಗಾರರಿಗೆ ನೆರವು ಹಾಗೂ ಮಾಹಿತಿ ಸೌಲಭ್ಯ ನೀಡಲಾಗುತ್ತಿದೆ. ತಾಲ್ಲೂಕಿನಾದ್ಯಂತ ಹೆಚ್ಚಿನ ಕ್ಷೇತ್ರ ವಿಸ್ತರಣೆಗೆ ಅವಕಾಶವಿದ್ದು, ವಿದ್ಯಾವಂತ ಯುವಕರೂ ಸಹ ರೇಷ್ಮೆ ಕೃಷಿಯಲ್ಲಿ ತೊಡಗಬಹುದಾಗಿದ್ದು,

ಪರಶಿಷ್ಟ ಜಾತಿ , ಪರಿಶಿಷ್ಟ ಪಂಗಡ, ಅಲ್ಪ ಸಂಖ್ಯಾತರು , ಸಣ್ಣ ಮತ್ತು ಅತಿಸಣ್ಣ ರೈತರು ಹಾಗೂ ಮಹಿಳಾ ರೇಷ್ಮೆ ಬೆಳೆಗಾರರಿಗೆ ವಿವಿಧ ಯೋಜನೆಗಳಡಿಯಲ್ಲಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

ತಾಲ್ಲೂಕಿಗೆ ಹತ್ತಿರವಾಗಿ ಹಾಸನ, ಕೆ.ಆರ್.ಪೇಟೆ ಸರ್ಕಾರಿ ಬಿತ್ತನೆ ಕೋಠಿಗಳಿಂದ ಹಾಗೂ ಕೇಂದ್ರ ರೇಷ್ಮೆ ಮಂಡಳಿವತಿಯಿಂದ ರೇಷ್ಮೆ ಮೊಟ್ಟೆ ರೈತರಿಗೆ ಲಭ್ಯವಾಗುತ್ತದೆ. ರೇಷ್ಮೆ ತರಬೇತಿ ಶಾಲೆ ಹಾಸನ ಇಲ್ಲಿ ರೇಷ್ಮೆ ಬೆಳೆಗಾರರಿಗೆ ತರಬೇತಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಹಿಪ್ಪುನೇರಳೆ ನಾಟಿ, ಹಿಪ್ಪುನೇರಳೆ ತೋಟಗಳಲ್ಲಿ ಟ್ರಂಚ್ ನಿರ್ಮಾಣ ಹಾಗೂ ಕಾಂಪೋಸ್ಟ್‌ಗುಂಡಿ ತೆಗೆದುಕೊಳ್ಳಲು ರೇಷ್ಮೆ ಬೆಳೆಗಾರರಿಗೆ ಸೌಲಭ್ಯ ನೀಡಲಾಗುತ್ತಿದೆ.

ಕನಿಷ್ಟ ಅವಧಿಯಲ್ಲಿ ಹೆಚ್ಚಿನ ಆದಾಯವನ್ನು ಪಡೆಯಬಹುದಾದ - ಅವಲಂಬನಾರ್ಹ ಬೆಳೆ ಇದಾಗಿದೆ.